# <u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು</u>

## <u>ಎಸ್.ಸಿ ನಂ. 15/2021</u>

ಫಿರ್ಯಾದುದಾರರುಃ ರಾಜ್ಯದ ಪರವಾಗಿ ಕವಲಂದೆ ಪೊಲೀಸರು
ಮೈಸೂರು.

ವಿರುದ್ಧ

ಆರೋಪಿ ನಂ.1: ಮಂಜುನಾಥ

## <u>ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರ ಪ್ರಕಾರ ಆರೋಪಿಯ ಹೇಳಿಕೆ</u>

1. ಅಭಿಯೋಜನೆಯ ಪರ ಸಾಕ್ಷಿಗಳು ನ್ಯಾಯಾಲಯದ ಸಮಕ್ಷಮ ನೀಡಿರುವ ಸಾಕ್ಷ್ಯವನ್ನು ಕೇಳಿದ್ದೀರಾ?

   ಆರೋಪಿಯ ಉತ್ತರಃ

2. ಪ್ರಾಸಾ-1 ಮಹೇಂದ್ರ ಇವರು ತಮ್ಮ ಸಾಕ್ಷ್ಯದಲ್ಲಿ ಆರೋಪಿಯಾದ ನೀವು ತಮ್ಮ ಸಂಬಂಧಿಯಾಗಿದ್ದು, ದಿಃ15.06.2020 ರಂದು ಮಧ್ಯಾಹ್ನ 1.30 ಗಂಟೆ ಸಮಯದಲ್ಲಿ ತಾನು, ಚಾಸಾ-2 ಪುಟ್ಟ ಮಾದಶೆಟ್ಟಿ ಮತ್ತು ಪ್ರಾಸಾ-3 ಪುಟ್ಟಸ್ವಾಮಿ ತಗಡೂರಿನಲ್ಲಿರುವ ವನಜಾಕ್ಷಿಯವರ ಜಮೀನಿನ ಸರ್ವೆ ನಂ.674/2/34 ರಲ್ಲಿ ಕೆಲಸ ಮಾಡುತ್ತಿರುವಾಗ ಆರೋಪಿಯಾದ ನೀವು ಮಾತನಾಡುವುದಿದೆ ಎಂದು ಹೇಳಿ ಅವರನ್ನು ಅದೇ ಜಮೀನಲ್ಲಿರುವ ಬಾಳೆಯ ತೋಟಕ್ಕೆ ಕರೆದುಕೊಂಡು ಹೋಗಿ ಅವರಿಗೆ ನಿಮ್ಮ ಹೆಂಡತಿಯೊಂದಿಗಿರುವ ಹಣಕಾಸಿನ ವ್ಯವಹಾರದ ಬಗ್ಗೆ ಮಾತನಾಡುತ್ತಾ ಗಲಾಟೆ ಮಾಡಿ ಮಚ್ಚಿನಿಂದ ಅವರ ಬಲಕಿವಿಯ ಕೆಳಗಡೆ ಹೊಡೆದಿದ್ದರಿಂದ ಗಾಯಗೊಂಡು ಅರೆ ಪ್ರಜ್ಞಾವಸ್ಥೆಯಲ್ಲಿದಾಗ ನೀವು ಅವರಿಗೆ ಸಿಕ್ಕ ಕಡೆಯೆಲ್ಲಾ ಮಚ್ಚು ಎಂ.ಓ.1 ರಿಂದ ಹೊಡೆದಿದ್ದರಿಂದ ಅವರ ಎಡಗೈ ಮಣಿಕಟ್ಟು, ಬಲಗೈ, ಮುಂಗೈಗೆ, ಎದೆಗೆ ಹಾಗೂ ತಲೆಗೆ ಗಾಯಗಳಾಗಿವೆ ಎಂಬುದಾಗಿ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ?

   ಆರೋಪಿಯ ಉತ್ತರಃ

3. ಪ್ರಾಸಾ-1 ರವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, ತಾನು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವಾಗ ಪೊಲೀಸರಿಗೆ ಘಟನೆಯ ಬಗ್ಗೆ ತಿಳಿಸಿದ್ದು, ಪೊಲೀಸರು ದೂರನ್ನು ನೊಂದಾಯಿಸಿದ್ದಾಗಿ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ?

   ಆರೋಪಿಯ ಉತ್ತರಃ

4. ಪ್ರಾಸಾ-1 ರವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, ಆರೋಪಿಯಾದ ನೀವು ನಿಮ್ಮ ಹೆಂಡತಿ ಮತ್ತು ತನಗೆ ಸಂಬಂಧವಿದೆ ಎನ್ನುವ ಕಾರಣಕ್ಕಾಗಿ ಹಲ್ಲೆ ಮಾಡಿದ್ದು, ತನಗೆ ಘಟನೆ ನಡೆದ ದಿನ ನೀವು ಧರಿಸಿದ ಸ್ವೆಟರ್ ಮುದ್ದೆ ಮಾಲು 2 ನ್ನು ತೋರಿಸಿದ್ದಾಗಿ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ?

ಆರೋಪಿಯ ಉತ್ತರಃ

**5.** ಪ್ರಾಸಾ-**2** ಪುಟ್ಟ ಮಾದಶೆಟ್ಟಿ ಹಾಗೂ ಪ್ರಾಸಾ.**3** ಪುಟ್ಟಸ್ವಾಮಿ ಇವರು ತಮ್ಮ ಸಾಕ್ಷ್ಯದಲ್ಲಿ **3** ವರ್ಷ **5** ತಿಂಗಳ ಹಿಂದೆ ತಾವು ಮಧ್ಯಾಹ್ನ **1** ಅಥವಾ **1.30** ಗಂಟೆ ಸಮಯದಲ್ಲಿ ತಗಡೂರಿನಲ್ಲಿರುವ ವನಜಾಕ್ಷಿಯವರ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದಾಗ ಪ್ರಾಸಾ.**1** ತಮಗೆ ಊಟ ತೆಗೆದುಕೊಂಡು ಬಂದಿದ್ದು, ತಾವೆಲ್ಲರೂ ಊಟ ಮಾಡುತ್ತಿದ್ದಾಗ ಆರೋಪಿಯಾದ ನೀವು ಬಂದು ಪ್ರಾಸಾ.**1** ರವರನ್ನು ಬಾಳೆಯ ತೋಟಕ್ಕೆ ಕರೆದುಕೊಂಡು ಹೋಗಿದ್ದಾಗಿ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ?

ಆರೋಪಿಯ ಉತ್ತರಃ

**6.** ಪ್ರಾಸಾ-**2** ಹಾಗೂ ಪ್ರಾಸಾ.**3** ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಗಲಾಟೆಯ ಶಬ್ದ ಕೇಳಿ ಸ್ಥಳಕ್ಕೆ ಹೋಗಿ ನೋಡಿದಾಗ ಪ್ರಾಸಾ.**1** ರವರು ಗಾಯಗೊಂಡು ಬಿದ್ದಿದ್ದು, ನೀವು ಪ್ರಾಸಾ.**1** ರವರ ತಲೆ, ಕಿವಿಯ ಕೆಳಗಡೆ ಹೊಡೆದು ಗಾಯ ಮಾಡಿ ಓಡಿ ಹೋಗಿದ್ದು, ಪ್ರಾಸಾ.**1** ರವರನ್ನು ವಿಚಾರಿಸಲಾಗಿ ನೀವು ಅವರಿಗೆ ನಿಮ್ಮ ಹೆಂಡತಿಯೊಂದಿಗೆ ಅವರಿಗೆ ಸಂಬಂಧವಿದೆ ಎನ್ನುವ ಕಾರಣಕ್ಕಾಗಿ ಹೊಡೆದಿದ್ದೀರಿ ಎಂದು ಹೇಳಿದ್ದಾಗಿ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ?

ಆರೋಪಿಯ ಉತ್ತರಃ

**7.** ಪ್ರಾಸಾ-**2** ಹಾಗೂ ಪ್ರಾಸಾ.**3** ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ತಾವು ನೋಡಿದಾಗ ನಿಮ್ಮ ಕೈಯಲ್ಲಿ ಹೆಲ್ಮೆಟ್ ಹಾಗೂ ಮುದ್ದೆ ಮಾಲು.**1** ಮಚ್ಚು ಇತ್ತು ಎಂಬುದಾಗಿ ಹಾಗೂ ಪ್ರಾಸಾ.**3** ರವರು ಈ ಬಗ್ಗೆ ಪೊಲೀಸರಿಗೆ ಹೇಳಿಕೆ ಕೊಟ್ಟಿದ್ದಾಗಿ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ?

ಆರೋಪಿಯ ಉತ್ತರಃ

**8.** ಪ್ರಾಸಾ-**2** ಮತ್ತು **3** ರವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, ಪ್ರಾಸಾ-**2** ಪೊಲೀಸರಿಗೆ ಗಲಾಟೆಯ ಸ್ಥಳವನ್ನು ತೋರಿಸಿದ ಮೇರೆಗೆ ಪೊಲೀಸರು ಸ್ಥಳದಲ್ಲಿ ಪಂಚನಾಮೆ ಮಾಡಿ ಸ್ಥಳದಿಂದ ಮುದ್ದೆ ಮಾಲು **3** ರಕ್ತ ಹತ್ತಿದ ಮಣ್ಣು ಹಾಗೂ ಮುದ್ದೆ ಮಾಲು **4** ಸಾದಾ ಮಣ್ಣನ್ನು ಡಬ್ಬಿಯಲ್ಲಿ ಹಾಕಿ ವಶಕ್ಕೆ ಪಡೆದುಕೊಂಡಿದ್ದು, ಈ ಬಗ್ಗೆ ಪಂಚನಾಮೆ ನಿಶಾನೆ ಪಿ.**4** ನ್ನು ತಯಾರಿಸಿದ್ದಾಗಿ ಹಾಗೂ ಈ ಬಗ್ಗೆ ತಾವು ಪೊಲೀಸರಿಗೆ ಹೇಳಿಕೆ ಕೊಟ್ಟಿದ್ದಾಗಿ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ?

ಆರೋಪಿಯ ಉತ್ತರಃ

**9.** ಪ್ರಾಸಾ-**5** ಸಣ್ಣಶೆಟ್ಟಿ ಇವರು ತಮ್ಮ ಸಾಕ್ಷ್ಯದಲ್ಲಿ **2-3** ವರ್ಷಗಳ ಹಿಂದೆ ಮಧ್ಯಾಹ್ನ **12.30 – 1.00** ಗಂಟೆ ಸಮಯದಲ್ಲಿ ಕವಲಂದೆ ಪೊಲೀಸರು ಆರೋಪಿಯಾದ ನಿಮ್ಮನ್ನು ಕರೆದುಕೊಂಡು ಪ್ರಾಸಾ.**1** ರವರ ಬಾಳೆತೋಟಕ್ಕೆ ಬಂದಿದ್ದು, ಅಲ್ಲಿಗೆ ಪ್ರಾಸ-**2** ರವರು ತನ್ನನ್ನು, ಚಾಸಾ-**7** ರವರನ್ನು ಗ್ರಾಮದ ಹಿರಿಯರನ್ನಾಗಿ ಕರೆದುಕೊಂಡು ಬಂದಿದ್ದು,

ನೀವು ಹೊಡೆಯಲು ಉಪಯೋಗಿಸಿದ ಬಾಳೆಯ ಗಿಡದ ಬುಡದಲ್ಲಿ ಬಿದ್ದಂತಹ ಮಚ್ಚನ್ನು ತೋರಿಸಿದ ಮೇರೆಗೆ ಪೊಲೀಸರು ಮಚ್ಚನ್ನು ಅಮಾನತ್ತು ಪಂಚನಾಮೆ ನಿಪಿ.**9** ಕೆಳಗೆ ವಶಕ್ಕೆ ಪಡೆದದ್ದಾಗಿ ಹಾಗೂ ಈ ಬಗ್ಗೆ ಪೊಲೀಸರ ಮುಂದೆ ಹೇಳಿಕೆ ಕೊಟ್ಟಿದ್ದಾಗಿ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ?

ಆರೋಪಿಯ ಉತ್ತರಃ

**10.** ಪ್ರಾಸಾ.**6** ದೊರೆಸ್ವಾಮಿ ಇವರು ತಮ್ಮ ಸಾಕ್ಷ್ಯದಲ್ಲಿ ದಿಃ**19.06.2020** ರಂದು ಕವಲಂದೆ ಪೊಲೀಸರು ತಮಗೆ ನಿಪಿ.**10** ನೋಟೀಸ್ ಜಾರಿ ಮಾಡಿದ್ದರ ಮೇರೆಗೆ ತಾವು ಪೊಲೀಸ್ ಠಾಣೆಗೆ ಹೋದಾಗ ಅಲ್ಲಿ ಆರೋಪಿಯಾದ ನೀವು ಇದ್ದು, ಪೊಲೀಸರು ಸರ್ಕಾರಿ ಜೀಪಿನಲ್ಲಿ ತಮ್ಮನ್ನು ಹಾಗೂ ನಿಮ್ಮನ್ನು ಕೂರಿಸಿಕೊಂಡು ಸಿದ್ದಲಿಂಗೇಶ್ವರ ಫಾರ್ಮ ಹೌಸ್‌ಗೆ ಕರೆದುಕೊಂಡು ಬಂದು, ನಿಮ್ಮನ್ನು ವಿಚಾರಿಸಲಾಗಿ ನೀವು ಬಾಳೆತೋಟಕ್ಕೆ ಹೋದಾಗ ಮೊದಲು ಒಂದು ಹಸಿರು ಬಣ್ಣದ ಸ್ವೆಟರ್ ಸಿಕ್ಕಿದ್ದು, ಸ್ವಲ್ಪ ಮುಂದೆ ಹೋದಾಗ ಒಂದು ಮಚ್ಚು ಸಿಕ್ಕಿದ್ದು, ಪೊಲೀಸರು ಅವುಗಳನ್ನು ಮಹಜರ್ ಮತ್ತು ಅಮಾನತ್ತು ಮಾಡಿದ್ದಾಗಿ, ಅದಕ್ಕೆ ತಾವು ಸಹಿ ಹಾಕಿದ್ದಾಗಿ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ?

ಆರೋಪಿಯ ಉತ್ತರಃ

**11.** ಪ್ರಾಸಾ.**8** ಡಾಃ ರಾಧಾ ಎಸ್ ಸಹಾಯಕ ನಿರ್ದೇಶಕರು ಆರ್.ಎಫ್.ಎಸ್.ಎಲ್. ಇವರು ತಮ್ಮ ಸಾಕ್ಷ್ಯದಲ್ಲಿ ದಿಃ**30.07.2020** ರಂದು ತಮ್ಮ ಕಚೇರಿಗೆ ಕವಲಂದೆ ಪೊಲೀಸ್ ಠಾಣೆಯ ಮೊಕದ್ದಮೆ ಸಂಖ್ಯೆ **78/2020** ರಲ್ಲಿಯ **5** ಸೀಲಾದ ವಸ್ತುಗಳನ್ನು ವಿಶ್ಲೇಷಣೆಗಾಗಿ ತಂದದ್ದನ್ನು ತಮ್ಮ ಸ್ವಾಗತ ವಿಭಾಗದವರು ಸ್ವೀಕರಿಸಿ ತಮ್ಮ ಜೀವ ಶಾಸ್ತ್ರ ವಿಭಾಗಕ್ಕೆ ಕಳುಹಿಸಿ ಕೊಟ್ಟಿದ್ದನ್ನು ತಾವು ಪಡೆದುಕೊಂಡು ಪರಿಶೀಲಿಸಿದಾಗ ಸೀಲುಗಳು ಸುಸ್ಥಿತಿಯಲ್ಲಿದ್ದು, ಮೇಲಿನ ವಿವರಗಳು ಮಾಲುಪಟ್ಟಿ ಹಾಗೂ ಮಾದರಿ ಸೀಲಿನೊಂದಿಗೆ ಹೋಲಿಕೆಯಾಗುತ್ತಿದ್ದುದಾಗಿ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ?

ಆರೋಪಿಯ ಉತ್ತರಃ

**12.** ಪ್ರಾಸಾ.**8** ರವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, ವಸ್ತು ಸಂಖ್ಯೆ **1** ರಲ್ಲಿ ರಕ್ತ ಮಿಶ್ರಿತ ಮಣ್ಣು, ವಸ್ತು ಸಂಖ್ಯೆ **2** ರಲ್ಲಿ ಮಾದರಿ ಮಣ್ಣು, ವಸ್ತು ಸಂಖ್ಯೆ **3** ರಲ್ಲಿ ಒಂದು ಮಚ್ಚು, ವಸ್ತು ಸಂಖ್ಯೆ **4** ರಲ್ಲಿ ಒಂದು ಸ್ವೆಟರ್ ಮತ್ತು ವಸ್ತು ಸಂಖ್ಯೆ **5** ರಲ್ಲಿ ಮಾದರಿ ರಕ್ತ ಇದ್ದು, ಇವೆಲ್ಲವನ್ನೂ ರಾಸಾಯನಿಕ ಹಾಗೂ ಸಿರಾಲಾಜಿಕಲ್ ಪರೀಕ್ಷೆಗೆ ಒಳಪಡಿಸಿದಾಗ ವಸ್ತು ಸಂಖ್ಯೆ **1, 3, 4** ರಲ್ಲಿ ಮನುಷ್ಯನ ಒ ಗುಂಪಿಗೆ ಸೇರಿದ ರಕ್ತದ ಕಲೆಗಳು ಕಂಡು ಬಂದಿದ್ದು, ವಸ್ತು ಸಂಖ್ಯೆ **2** ರಲ್ಲಿಯಾವುದೇ ಕಲೆ ಇರಲಿಲ್ಲ. ವಸ್ತು ಸಂಖ್ಯೆ **5** ರಲ್ಲಿ ಮಾದರಿ ರಕ್ತ ಹಾಳಾಗಿದ್ದರಿಂದ ಅದರ ಮೂಲ ಹಾಗೂ ಗುಂಪನ್ನು ಕಂಡು ಹಿಡಿಯಲು ಸಾಧ್ಯವಾಗಲಿಲ್ಲ ಎಂಬುದಾಗಿ ಹಾಗೂ ಮುದ್ದೆ ಮಾಲು **1** ರಿಂದ **4** ತಾವು ಪರೀಕ್ಷೆ ಮಾಡಿದ ವಸ್ತು ಸಂಖ್ಯೆ **1** ರಿಂದ **4** ಎಂದೂ ಮತ್ತು ಮುದ್ದೆ ಮಾಲು **5** ತಾವು ಮರಳಿ ಕಳುಹಿಸಿದ ಮಾದರಿ ರಕ್ತದ ಸೀಲಾದ ಕವರ್ ಎಂದೂ, ಅವುಗಳ ಮೇಲೆ ತಮ್ಮ ಕಚೇರಿಯ ಸೀಲ್ ಹಾಗೂ ತಾವು ಸಹಿ ಹಾಕಿದ್ದಾಗಿ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ?

ಆರೋಪಿಯ ಉತ್ತರಃ

13. ಪ್ರಾಸಾ.8 ರವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, ಅಭಿಪ್ರಾಯ ವರದಿಯನ್ನು ನಿಪಿ.12 ರಂತೆ ಪೊಲೀಸರಿಗೆ ಕೊಟ್ಟಿದ್ದಾಗಿ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ?

ಆರೋಪಿಯ ಉತ್ತರಃ

14. ಪ್ರಾಸಾ.9 ಡಾಃ ಸಚಿನ್ ಇವರು ತಮ್ಮ ಸಾಕ್ಷ್ಯದಲ್ಲಿ ಕವಲಂದೆ ಪೊಲೀಸರು ಗಾಯಾಳು ಮಹೇಂದ್ರರವರು ಹೇಳಿಕೆ ಕೊಡುವ ಸ್ಥಿತಿಯಲ್ಲಿದ್ದಾರೆಯೇ ಎಂದು ಮಾಹಿತಿಯನ್ನು ನಿಪಿ.14 ರಂತೆ ಲಿಖಿತವಾಗಿ ಕೇಳಿದ್ದರಿಂದ ತಾವು ತಮ್ಮ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಮಹೇಂದ್ರರವರನ್ನು ಪರೀಕ್ಷೆ ಮಾಡಿ ಅವರು ಹೇಳಿಕೆ ಕೊಡುವ ಸ್ಥಿತಿಯಲ್ಲಿದ್ದಾರೆಂದು ಮಾಹಿತಿ ಒದಗಿಸಿದ್ದರ ಮೇರೆಗೆ ಆರಕ್ಷಕ ಮುಖ್ಯ ಪೇದೆ 120 ರವರು ತಮ್ಮ ಸಮಕ್ಷಮದಲ್ಲಿ ಗಾಯಾಳುವನ್ನು ವಿಚಾರಣೆ ಮಾಡಿ ನಿಪಿ.1 ರಂತೆ ಹೇಳಿಕೆ ಪಡೆದರೆಂಬುದಾಗಿ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ?

ಆರೋಪಿಯ ಉತ್ತರಃ

15. ಪ್ರಾಸಾ.10 ಜವರಯ್ಯ ನಿವೃತ್ತ ಮುಖ್ಯ ಪೇದೆ ಇವರು ತಮ್ಮ ಸಾಕ್ಷ್ಯದಲ್ಲಿ ದಿಃ15.06.2020 ರಂದು ಚಾಸಾ-19 ರವರ ಮೌಖಿಕ ಆದೇಶದ ಮೇರೆಗೆ ನಿಪಿ.15 ರಂತೆ ಕೆ.ಆರ್. ಆಸ್ಪತ್ರೆಯ ಮೆಮೋವನ್ನು ಪಡೆದುಕೊಂಡು, ಅದರ ಆಧಾರದ ಮೇಲೆ ನಿಪಿ.14 ರ ಪ್ರಕಾರ ವೈದ್ಯರಿಗೆ ರಿಕ್ವಿಜಿಷನ್ ಕೊಟ್ಟು, ಆ ಪ್ರಕಾರ ರಾತ್ರಿ 9.20 ರಿಂದ 9.50 ಗಂಟೆಯವರೆಗೆ ಪ್ರಾಸಾ-9 ರವರ ಸಮಕ್ಷಮ ಪ್ರಾಸಾ-1 ರವರ ಹೇಳಿಕೆಯನ್ನು ನಿಪಿ.1 ರಂತೆ ಪಡೆದುಕೊಂಡು, ಮರಳಿ ಮಧ್ಯರಾತ್ರಿ 12 ಗಂಟೆಗೆ ಚಾಸಾ-19 ರವರ ಮುಂದೆ ನಿಪಿ.1 ನ್ನು ಠಾಣೆಯಲ್ಲಿ ಹಾಜರುಪಡಿಸಿದ್ದಾಗಿ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ?

ಆರೋಪಿಯ ಉತ್ತರಃ

16. ಪ್ರಾಸಾ.13 ಎಸ್. ಲೋಕೇಶ್ ಸಿಪಿಸಿ-452 ಇವರು ತಮ್ಮ ಸಾಕ್ಷ್ಯದಲ್ಲಿ ತಮಗೆ ಆರೋಪಿಯಾದ ನೀವು ಹೆಬ್ಬಾಳ ಬಸ್ ನಿಲ್ದಾಣದ ಬಳಿ ಇದ್ದೀರೆಂದು ಬಾತ್ಮೀದಾರರಿಂದ ಮಾಹಿತಿ ದೊರೆತ ಮೇರೆಗೆ ತಾವು ಹಾಗೂ ಚಾಸಾ-17 ದಿಃ19.06.2020 ರ ಬೆಳಿಗ್ಗೆ 8-15 ಗಂಟೆ ಸಮಯದಲ್ಲಿ ಹೆಬ್ಬಾಳ ಬಸ್ ನಿಲ್ದಾಣಕ್ಕೆ ಹೋಗಿ ಗಮನಿಸಿದಾಗ ನೀವು ಸ್ಥಳದಲ್ಲಿದ್ದು, ವಿಚಾರಣೆ ಮಾಡಲಾಗಿ ನೀವು ನಿಮ್ಮ ಹೆಸರನ್ನು ತಿಳಿಸಿದ ಮೇರೆಗೆ ನಿಮ್ಮನ್ನು ವಶಕ್ಕೆ ಪಡೆದು ನಿಪಿ.19 ರಂತೆ ವರದಿಯೊಂದಿಗೆ ನಿಮ್ಮನ್ನು ಪಿ.ಎಸ್.ಐ.ರವರ ಮುಂದೆ ಹಾಜರುಪಡಿಸಿದ್ದಾಗಿ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ?

ಆರೋಪಿಯ ಉತ್ತರಃ

17. ಪ್ರಾಸಾ.13 ರವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, ತಾವು ತಗಡೂರು ಗ್ರಾಮದ ಜವರಶೆಟ್ಟಿ ಅವರ ಜಮೀನಿನ ಹತ್ತಿರ ನಿಲ್ಲಿಸಿದ ಕೃತ್ಯಕ್ಕೆ ಸಂಬಂಧಿಸಿದಂತಹ ಬೈಕ್

ನಂ.ಕೆಎ-09-ಇಆರ್-1902 ಅನ್ನು ವಶಕ್ಕೆ ಪಡೆದುಕೊಂಡು ತನಿಖಾಧಿಕಾರಿಯ ಮುಂದೆ ಹಾಜರುಪಡಿಸಿದ್ದಾಗಿ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ?

ಆರೋಪಿಯ ಉತ್ತರಃ

**18.** ಪ್ರಾಸಾ.**13** ರವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, ತನಿಖಾಧಿಕಾರಿಯು ಸದರಿ ಬೈಕನ್ನು ಚಾಸಾ-**8** ಮತ್ತು **9** ರವರ ಸಮಕ್ಷಮ ನಿಪಿ.**11** ರಂತೆ ಪಂಚನಾಮೆಯಡಿ ವಶಕ್ಕೆ ಪಡೆದುಕೊಂಡದ್ದಾಗಿ ಹಾಗೂ ಸದರಿ ದಿನ ಹೆಲ್ಮೆಟ್ ಸಿಗಲಿಲ್ಲವಾದ್ದರಿಂದ ತಾವು ತಮ್ಮ ವರದಿಯಲ್ಲಿ ನಮೂದಿಸಿದ ಸ್ಥಳಗಳಿಗೆ ಭೇಟಿ ಕೊಟ್ಟು ತಪಾಸಣೆ ಮಾಡಲಾಗಿ ಹೆಲ್ಮೆಟ್ ದೊರೆಯಲಿಲ್ಲವಾದ್ದರಿಂದ ಆ ಬಗ್ಗೆ ತನಿಖಾಧಿಕಾರಿಗೆ ನಿಪಿ.**20** ರಂತೆ ವರದಿಯನ್ನು ಕೊಟ್ಟಿರುವುದಾಗಿ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ?

ಆರೋಪಿಯ ಉತ್ತರಃ

**19.** ಪ್ರಾಸಾ.**14** ಅಮ್ಮಾಜಾನ್ ಪಿ.ಎಸ್.ಐ.ರವರು ತಮ್ಮ ಸಾಕ್ಷ್ಯದಲ್ಲಿ ತಾವು ದಿಃ**15.06.2020** ರಂದು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಕೆ.ಆರ್. ಆಸ್ಪತ್ರೆಯಿಂದ ನಿಪಿ.**15** ರಂತೆ ಎಂ.ಎಲ್.ಸಿ. ಯನ್ನು ಪಡೆದುಕೊಂಡು ಪ್ರಾಸಾ,**10** ರವರನ್ನು ಚಿಕಿತ್ಸೆ ಪಡೆಯುತ್ತಿದ್ದ ಗಾಯಾಳುವಿನ ಹೇಳಿಕೆ ಪಡೆದುಕೊಂಡು ಬರುವಂತೆ ಕಳುಹಿಸಿಕೊಟ್ಟು, ನಿಪಿ.**1** ರ ಆಧಾರದ ಮೇಲೆ ಮೊಕದ್ದಮೆ ಸಂಖ್ಯೆಃ**78/2020** ನ್ನು ದಾಖಲು ಮಾಡಿಕೊಂಡು ನಿಪಿ.**21** ರಂತೆ ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಹಾಗೂ ಮೇಲಾಧಿಕಾರಿಯವರಿಗೆ ಕಳುಹಿಸಿಕೊಟ್ಟಿರುವುದಾಗಿ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ?

ಆರೋಪಿಯ ಉತ್ತರಃ

**20.** ಪ್ರಾಸಾ.**14** ರವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, ದಿಃ**16.06.2020** ರಂದು ಬೆಳಿಗ್ಗೆ **11** ಗಂಟೆಗೆ ಘಟನಾ ಸ್ಥಳಕ್ಕೆ ಭೇಟಿ ಕೊಟ್ಟು ಪ್ರಾಸಾ-**4** ಮತ್ತು ಚಾಸಾ-**5** ರವರ ಸಮಕ್ಷಮ ಪ್ರಾಸಾ-**2** ರವರು ತೋರಿಸಿದ ಸ್ಥಳವನ್ನು ನಿಪಿ.**4** ರ ಪ್ರಕಾರ ಪಂಚನಾಮೆ ಮಾಡಿ, ಪಂಚನಾಮೆ ಕಾಲಕ್ಕೆ ರಕ್ತಹತ್ತಿದ ಮಣ್ಣು ಹಾಗೂ ಸಾದಾ ಮಣ್ಣನ್ನು ವಶಪಡಿಸಿಕೊಂಡಿರುವುದಾಗಿ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ?

ಆರೋಪಿಯ ಉತ್ತರಃ

**21.** ಪ್ರಾಸಾ.**14** ರವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, ದಿಃ**19.06.2020** ರಂದು ಪ್ರಾಸಾ-**13** ಹಾಗೂ ಚಾಸಾ-**17** ರವರು ಆರೋಪಿಯಾದ ನಿಮ್ಮನ್ನು ಪತ್ತೆ ಮಾಡಿ ತಮ್ಮ ಮುಂದೆ ಹಾಜರುಪಡಿಸಿದ ಮೇರೆಗೆ, ನಿಮ್ಮನ್ನು ವಿಚಾರಣೆ ಮಾಡಿ, ಸ್ವ ಇಚ್ಚಾ ಹೇಳಿಕೆಯನ್ನು ಪಡೆದುಕೊಂಡದ್ದಾಗಿ ಹಾಗೂ ನೀವು ನಿಮ್ಮ ಸ್ವ ಇಚ್ಚಾ ಹೇಳಿಕೆಯಲ್ಲಿ ಕೃತ್ಯಕ್ಕೆ ಉಪಯೋಗಿಸಿದ ಮಚ್ಚನ್ನು ಹಾಗೂ ಕೃತ್ಯದ ಸಮಯದಲ್ಲಿ ನೀವು ಧರಿಸಿದ ಸ್ವೆಟರನ್ನು ಇಟ್ಟ ಸ್ಥಳ ತೋರಿಸುವುದಾಗಿ ಹೇಳಿಕೆ ಕೊಟ್ಟಿರುವುದಾಗಿ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ?

ಆರೋಪಿಯ ಉತ್ತರಃ

**22.** ಪ್ರಾಸಾ.**14** ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಪ್ರಾಸಾ.**5** ಮತ್ತು **6** ರವರನ್ನು ನಿಪಿ.**10** ರಂತೆ ನೋಟೀಸ್ ಕೊಟ್ಟು ಕರೆಸಿಕೊಂಡು, ಆರೋಪಿಯಾದ ನಿಮ್ಮೊಂದಿಗೆ ಇಲಾಖಾ ವಾಹನದಲ್ಲಿ ನೀವು ತೋರಿಸಿದ ಕಿರುಗುಂದ ಗ್ರಾಮದಿಂದ ಅರ್ಧ ಕಿಲೋ ಮೀಟರ್ ದೂರದಲ್ಲಿರುವ ಫಾರ್ಮ ಹತ್ತಿರ ಇರುವ ಕೃತ್ಯ ನಡೆದ ಸ್ಥಳಕ್ಕೆ ಹೋದಾಗ ನೀವು ಹಲ್ಲೆ ಮಾಡಿದ ಸ್ಥಳವನ್ನು ತೋರಿಸಿದಿರಿ ಎಂಬುದಾಗಿ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ?

ಆರೋಪಿಯ ಉತ್ತರಃ

**23.** ಪ್ರಾಸಾ.**14** ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಕೃತ್ಯ ನಡೆದ ಸ್ಥಳದಿಂದ **50** ಅಡಿ ದೂರದಲ್ಲಿ ಬಿಸಾಡಿದ ಮಚ್ಚನ್ನು ತೆಗೆದುಕೊಂಡು ತಮಗೆ ತೋರಿಸಿದ ಮೇರೆಗೆ ತಾವು ಅದನ್ನು ಪಂಚರ ಸಮಕ್ಷಮ ಅಮಾನತ್ತುಪಡಿಸಿ ಸೀಲ್ ಮಾಡಿದ್ದಾಗಿ ಹಾಗೂ ಫಾರ್ಮ ಹೌಸ್ ತಗಡೂರು ಕಡೆಗೆ ಹೋಗುವ ರಸ್ತೆಯಲ್ಲಿ ನೀವು **80** ಅಡಿ ದೂರದ ಪೊದೆಯಲ್ಲಿ ಇಟ್ಟಿದ್ದ ಸ್ವೆಟರ್ ಅನ್ನು ತೆಗೆದು ತೋರಿಸಿ ಹಾಜರುಪಡಿಸಿದ್ದು, ಅದು ಹಸಿರು ಬಣ್ಣದ ಉಲ್ಲನ್ನಿನ, ಅಲ್ಲಲ್ಲಿ ರಕ್ತ ಹತ್ತಿದ ಸ್ಲೀವ್‌ಲೆಸ್ ಸ್ವೆಟರ್ ಆಗಿದ್ದು ಅದನ್ನು ಪಂಚರ ಸಮಕ್ಷಮ ಅಮಾನತ್ತುಪಡಿಸಿ ಬಿಳಿ ಬಟ್ಟೆಯಿಂದ ಕವರ್ ಮಾಡಿ ಸೀಲ್ ಮಾಡಿದ್ದಾಗಿ, ಅಮಾನತ್ತು ಮಹಜರ್ ಹಾಗೂ ನಿಮ್ಮ ಸ್ವಇಚ್ಚಾ ಹೇಳಿಕೆಗೆ ತಾವು ಸಹಿ ಹಾಕಿದ್ದಾಗಿ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ?

ಆರೋಪಿಯ ಉತ್ತರಃ

**24.** ಪ್ರಾಸಾ.**14** ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಪಂಚರಾದ ಪ್ರಾಸಾ-**5** ಮತ್ತು **6** ರವರ ಹೇಳಿಕೆಗಳನ್ನು ಪಡೆದುಕೊಂಡು, ಅಮಾನತ್ತುಪಡಿಸಿಕೊಂಡ ಮುದ್ದೆ ಮಾಲು **1** ಮತ್ತು **2** ಗಳನ್ನು ಮಾಲುಪಟ್ಟಿ ಸಂಖ್ಯೆ **65/2020** ರಲ್ಲಿ ನಮೂದು ಮಾಡಿ, ನಂತರ ಅಮಾನತ್ತುಪಡಿಸಿಕೊಂಡ ವಸ್ತುಗಳನ್ನು ಆರ್.ಎಫ್.ಎಸ್.ಎಲ್.ಗೆ ಕಳುಹಿಸಲು ಮತ್ತು ತಮ್ಮ ವಶದಲ್ಲಿಟ್ಟುಕೊಳ್ಳಲು ನ್ಯಾಯಾಲಯಕ್ಕೆ ಮನವಿ ಮಾಡಿಕೊಂಡದ್ದಾಗಿ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ?

ಆರೋಪಿಯ ಉತ್ತರಃ

**25.** ಪ್ರಾಸಾ.**14** ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಆರೋಪಿಯಾದ ನಿಮ್ಮ ದಸ್ತಗಿರಿ ಕ್ರಮ ಜರುಗಿಸಿ, ನಂಜನಗೂಡು ಸರ್ಕಾರಿ ಆಸ್ಪತ್ರೆಯಲ್ಲಿ ನಿಮ್ಮನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ ವರದಿಯನ್ನು ಪಡೆದು, ನಂತರ ವಿ.ಸಿ. ಮೂಲಕ ನಿಮ್ಮನ್ನು ನ್ಯಾಯಾಧೀಶರ ಮುಂದೆ ಹಾಜರುಪಡಿಸಿ, ನಂತರ ಕೋವಿಡ್ ಪರೀಕ್ಷಾ ವರದಿ ನೆಗೆಟಿವ್ ಇದ್ದುದರಿಂದ ನ್ಯಾಯಾಂಗ ಬಂಧನಕ್ಕೆ ನೀಡಿ, ನಂತರ ಚಾಸಾ-**2** ಮತ್ತು **3** ರವರನ್ನು ವಿಚಾರಿಸಿ ಹೇಳಿಕೆಗಳನ್ನು ಪಡೆದುಕೊಂಡದ್ದಾಗಿ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ?

ಆರೋಪಿಯ ಉತ್ತರಃ

**26.** ಪ್ರಾಸಾ.**14** ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿ:**20.06.2020** ರಂದು ಆರೋಪಿಯಾದ ನೀವು ಕೃತ್ಯದ ಸಮಯದಲ್ಲಿ ಬಳಸಿದ ಮೋಟಾರ್ ಬೈಕ್ ಹಾಗೂ ಹೆಲ್ಮೆಟ್ ಅನ್ನು ತಗಡೂರು ಗ್ರಾಮದ ನೀರು ಹರಿಯುವ ಓಣಿ ಬಳಿ ಇಟ್ಟಿದ್ದೇನೆಂದು ಹೇಳಿದ್ದರಿಂದ ಪ್ರಾಸಾ-**7** ಮತ್ತು **11** ರವರನ್ನು ಕರೆದುಕೊಂಡು ಸದರಿ ಸ್ಥಳಕ್ಕೆ ಹೋಗಿ ವಾಹನವನ್ನು ಪಂಚನಾಮೆ ಮುಖಾಂತರ ಅಮಾನತ್ತುಪಡಿಸಿಕೊಂಡಿದ್ದಾಗಿ, ನಂತರ ಪ್ರಾಸಾ-**7** ಮತ್ತು **11** ರವರ ಹೇಳಿಕೆಯನ್ನು ಪಡೆದುಕೊಂಡು ಅಮಾನತ್ತುಪಡಿಸಿಕೊಂಡ ಬೈಕನ್ನು ಮಾಲುಪಟ್ಟಿ ಸಂಖ್ಯೆ **66/2020** ರಲ್ಲಿ ನಮೂದು ಮಾಡಿದ್ದಾಗಿ ಹಾಗೂ ದಿ:**30.06.2020** ರಂದು ಪ್ರಾಸಾ-**12** ರವರನ್ನು ವಿಚಾರಿಸಿ ಹೇಳಿಕೆ ಪಡೆದುಕೊಂಡದ್ದಾಗಿ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ?

ಆರೋಪಿಯ ಉತ್ತರ:

**27.** ಪ್ರಾಸಾ.**14** ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ತಾವು ದಿ:**20.08.2020** ರಂದು ಪ್ರಾಸಾ-**1** ರವರ ಗಾಯದ ಪ್ರಮಾಣಪತ್ರವನ್ನು ನಿಪಿ.**8** ರಂತೆ ಪಡೆದುಕೊಂಡು ನಂತರ ಆರ್.ಎಫ್.ಎಸ್.ಎಲ್. ವರದಿಯನ್ನು ಪಡೆದುಕೊಂಡು, ದಿ:**28.08.2020** ರಂದು ಕೃತ್ಯ ನಡೆದ ಸ್ಥಳದ ಸರ್ವೆ ನಂ.**674/4** ಯಾರಿಗೆ ಸೇರಿದೆ ಎಂದು ತಿಳಿಯಲು ಆರ್.ಟಿ.ಸಿ.ಯನ್ನು ನಿಪಿ.**2** ರಂತೆ ಪಡೆದುಕೊಂಡು, ದೋಷಾರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದಾಗಿ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ?

ಆರೋಪಿಯ ಉತ್ತರ:

**28.** ಈ ಕೇಸಿನ ಬಗ್ಗೆ ನ್ಯಾಯಾಲಯಕ್ಕೆ, ನೀವು ಹೆಚ್ಚಿಗೆ ಏನಾದರೂ ಹೇಳಲು ಬಯಸುವಿರಾ?

ಆರೋಪಿಯ ಉತ್ತರ:

**29.** ನಿಮ್ಮ ಪರ ವಿಚಾರಣೆ ಮಾಡಲು ಸಾಕ್ಷಿಗಳೇನಾದರೂ ಇದ್ದಾರೆಯೇ?

ಆರೋಪಿಯ ಉತ್ತರ:

(ಮೇಲಿನ ಹೇಳಿಕೆಗಳನ್ನು ಆರೋಪಿಗೆ ತಿಳಿಯುವ ಕನ್ನಡ ಭಾಷೆಯಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ, ಓದಿ ಹೇಳಿ, ನಂತರ ಆರೋಪಿಯು ಉತ್ತರಿಸಿದ ಭಾಷೆಯಲ್ಲಿಯೇ ನನ್ನ ಸಮಕ್ಷಮದಲ್ಲಿ ಕೇಳಿ ಬರೆದುಕೊಳ್ಳಲಾಯಿತೆಂದು ದೃಢೀಕರಿಸುತ್ತೇನೆ.)

ದಿನಾಂಕ: **08.04.2025**

(ಉಷಾರಾಣಿ )
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು.

ಆರೋಪಿಯ ಸಹಿ: